18/09/23 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ತಂದೆಯ ಆಸೆಯಾಗಿದೆ - ಮಕ್ಕಳು ಪೂರ್ಣ ನಷ್ಟಮೋಹಿಗಳಾಗಲಿ, ಯಾವಾಗ ಬಾಬಾ ನಮ್ಮವರು ನಾವು ನಿಮ್ಮವರಾಗಿದ್ದೇವೆಂದು ಪಕ್ಕಾ ಪ್ರತಿಜ್ಞೆ ಮಾಡುತ್ತೀರೋ ಆಗ ಸತ್ಯಪ್ರೀತಿಯು ಜೋಡಣೆಯಾಗುತ್ತದೆ"

ಪ್ರಶ್ನೆ: ರುದ್ರ ಶಿವತಂದೆಯ ಮೂಲಕ ರಚಿಸಿರುವ ಯಜ್ಞ ಮತ್ತು ಮನುಷ್ಯರ ಮೂಲಕ ರಚಿಸಲಾಗುತ್ತಿರುವ ಯಜ್ಞಗಳಿಗೆ ಮುಖ್ಯ ಅಂತರವೇನಿದೆ?

ಉತ್ತರ: ಮನುಷ್ಯರು ಯಾವುದೆಲ್ಲಾ ಯಜ್ಞಗಳನ್ನು ರಚಿಸುತ್ತಾರೆಯೋ ಅದರಲ್ಲಿ ಎಳ್ಳು, ಎಣ್ಣೆ ಇತ್ಯಾದಿಗಳನ್ನು ಸ್ವಾಹಾ ಮಾಡುತ್ತಾರೆ, ಅದು ಸ್ಥೂಲಯಜ್ಞವಾಗಿದೆ. ಆದರೆ ತಂದೆಯು ಯಾವ ಯಜ್ಞವನ್ನು ರಚಿಸಿದ್ದಾರೆಯೋ ಇದು ಜ್ಞಾನಯಜ್ಞವಾಗಿದೆ. ಇದರಲ್ಲಿ ಇಡೀ ಪ್ರಪಂಚವೇ ಸ್ವಾಹಾ ಆಗಿಬಿಡುತ್ತದೆ. 2. ಆ ಯಜ್ಞವು ಸ್ವಲ್ಪ ಸಮಯದವರೆಗೆ ನಡೆಯುತ್ತದೆ. ಆದರೆ ಈ ಯಜ್ಞವು ಎಲ್ಲಿಯವರೆಗೆ ವಿನಾಶವಾಗುವುದಿಲ್ಲವೋ ಅಲ್ಲಿಯವರೆಗೆ ನಡೆಯುತ್ತಿರುತ್ತದೆ. ಯಾವಾಗ ನೀವು ಮಕ್ಕಳು ಕರ್ಮಾತೀತ ಸ್ಥಿತಿಯನ್ನು ತಲುಪುತ್ತೀರಿ ಆಗ ಯಜ್ಞದ ಸಮಾಪ್ತಿಯಾಗುವುದು.

ಗೀತೆ: ನಿರ್ಬಲನೊಂದಿಗೆ ಬಲಶಾಲಿಯ ಯುದ್ಧ...................

ಓಂ ಶಾಂತಿ. ಈಗ ಮಕ್ಕಳು ಇದನ್ನು ತಿಳಿದುಕೊಂಡಿದ್ದೀರಿ - ಇದನ್ನು ಪಾಠಶಾಲೆಯೆಂದೂ ಹೇಳುತ್ತಾರೆ ಮತ್ತು ಜ್ಞಾನಯಜ್ಞವೆಂದೂ ಹೇಳುತ್ತಾರೆ. ಪಾಠಶಾಲೆಯ ಲೆಕ್ಕದಲ್ಲಿ ಗುರಿ-ಉದ್ದೇಶವಂತೂ ಅವಶ್ಯವಾಗಿರಬೇಕು. ಈಗ ಇದು ಯಜ್ಞಕ್ಕೆ ಯಜ್ಞವೂ ಆಗಿದೆ ಮತ್ತು ಪಾಠಶಾಲೆಯೂ ಆಗಿದೆ. ರುದ್ರಜ್ಞಾನಯಜ್ಞವಾಗಿದೆ. ಇದನ್ನು ಅವರು ಕಾಪಿ ಮಾಡುತ್ತಾರೆ. ಸ್ಥೂಲಯಜ್ಞವನ್ನು ರಚಿಸುತ್ತಾರೆ, ಅದರಲ್ಲಿ ಎಳ್ಳು, ಎಣ್ಣೆ ಮುಂತಾದುವುಗಳನ್ನು ಸ್ವಾಹಾ ಮಾಡುತ್ತಾರೆ ಮತ್ತು ಇನ್ನೂ ಕೆಲವರು ಬಹಳ ದೊಡ್ಡ ಯಜ್ಞವನ್ನು ರಚಿಸುತ್ತಾರೆ, ಅಲ್ಲಿ ನಾಲ್ಕೂಕಡೆ ಶಾಸ್ತ್ರಗಳನ್ನು ಇಡುತ್ತಾರೆ. ಬಹಳ ದೊಡ್ಡ ಮೈದಾನವನ್ನು ತೆಗೆದುಕೊಳ್ಳುತ್ತಾರೆ. ಒಂದುಕಡೆ ಅನ್ನ, ತುಪ್ಪ, ಹಿಟ್ಟು ಇತ್ಯಾದಿಗಳೆಲ್ಲವನ್ನೂ ಇಡುತ್ತಾರೆ ಮತ್ತು ಇನ್ನೊಂದು ಕಡೆ ಎಲ್ಲಾ ಶಾಸ್ತ್ರಗಳನ್ನಿಡುತ್ತಾರೆ. ಯಾವ ಶಾಸ್ತ್ರಗಳನ್ನು ಕೇಳಿದರೂ ಅವರು ತಿಳಿಸುತ್ತಾರೆ ಮತ್ತು ಆ ಯಜ್ಞದಲ್ಲಿ ಸ್ವಾಹಾ ಮಾಡುತ್ತಿರುತ್ತಾರೆ. ತಂದೆಯು ತಿಳಿಸುತ್ತಾರೆ - ಈ ರುದ್ರ ಎಂಬುದು ನನ್ನ ಹೆಸರಾಗಿದೆ. ರುದ್ರಭಗವಂತನು ಜ್ಞಾನಯಜ್ಞವನ್ನು ರಚಿಸಿದ್ದರೆಂದು ಹೇಳುತ್ತಾರೆ. ಇದರ ಹೆಸರು ರುದ್ರಜ್ಞಾನಯಜ್ಞವೆಂದಾಗಿದೆ. ಹೇಗೆ ನೆಹರುರವರ ನಂತರ ನೆಹರುಮಾರ್ಗ, ನೆಹರು ಉದ್ಯಾನವನ ಇತ್ಯಾದಿ ಹೆಸರುಗಳನ್ನಿಡುತ್ತಾರೆ ಹಾಗೆಯೇ ಈ ರುದ್ರನಂತೂ ಭಗವಂತ ಶಿವನಾಗಿದ್ದಾರೆ. ಅವರೇ ರುದ್ರಜ್ಞಾನಯಜ್ಞವನ್ನು ರಚಿಸಿದ್ದಾರೆ. ಈ ಯಜ್ಞದಲ್ಲಿ ಇಡೀ ಪ್ರಪಂಚವು ಆಹುತಿಯಾಗುತ್ತದೆ. ಇದು ಯಾರ ಬುದ್ಧಿಯಲ್ಲಿಯೂ ಇಲ್ಲ. ಎಷ್ಟು ದೊಡ್ಡ ಸೃಷ್ಟಿಯಾಗಿದೆ, ಎಷ್ಟು ದೂರ-ದೂರ ನಗರಗಳಿವೆ. ಇವೆಲ್ಲವೂ ಅವಿನಾಶಿ ಜ್ಞಾನಯಜ್ಞದಲ್ಲಿ ಆಹುತಿಯಾಗಿಬಿಡುತ್ತದೆ. ಹಳೆಯ ಪ್ರಪಂಚದ ವಿನಾಶವಂತೂ ಅವಶ್ಯವಾಗಿ ಆಗಲಿದೆ ನಂತರ ಹೊಸಪ್ರಪಂಚವಾಗುವುದು. ವಿನಾಶವಾಗುವುದರಲ್ಲಿ ಪ್ರಾಕೃತಿಕ ಆಪತ್ತುಗಳೂ ಸಹ ಸಹಯೋಗ ನೀಡುತ್ತವೆ ಅಂದಾಗ ಇದು ರುದ್ರ ರಾಜಸ್ವ ಅಶ್ವಮೇಧ ಅವಿನಾಶಿ ಜ್ಞಾನಯಜ್ಞವಾಗಿದೆ. ಅವಿನಾಶಿ ಎಂದರೆ ಎಲ್ಲಿಯವರೆಗೆ ವಿನಾಶವಾಗುವುದಿಲ್ಲವೋ ಅಲ್ಲಿಯವರೆಗೆ ನಡೆಯುತ್ತಾ ಇರುತ್ತದೆ ಎಂದರ್ಥ. ಇಂತಹ ಯಜ್ಞವು ಯಾರದೂ ನಡೆಯುವುದಿಲ್ಲ. ಬಹಳಕ್ಕಿಂತ ಬಹಳ ಒಂದು ತಿಂಗಳ ಕಾಲ ಮಾಡುತ್ತಾರೆ. ಗೀತೆಯಲ್ಲಿಯೂ ಒಂದು ತಿಂಗಳ ಕಾಲ ತಿಳಿಸುತ್ತಾರೆ. ಈಗ ತಂದೆಯು ತಿಳಿಸುತ್ತಾರೆ - ನಾನು ಈ ಜ್ಞಾನಯಜ್ಞವನ್ನು ರಚಿಸಿದ್ದೇನೆ, ಇದು ರಾಜಸ್ವ ಅಶ್ವಮೇಧ ಅಂದರೆ ನಿಮ್ಮ ಯಾವ ರಥವಿದೆ, ಅದನ್ನು ಸ್ವಾಹಾ ಮಾಡಬೇಕು, ಬಲಿಹಾರಿಯಾಗಬೇಕಾಗಿದೆ. ಅವರು ಬೇರೆ ಹೆಸರನ್ನು ಇಟ್ಟುಬಿಟ್ಟಿದ್ದಾರೆ. ದಕ್ಷಾಪ್ರಜಾಪತಿಯ ಯಜ್ಞವೆಂದು ತೋರಿಸುತ್ತಾರೆ ಅದರಲ್ಲಿ ಕುದುರೆಯನ್ನು ಸುಡುತ್ತಾರೆ. ಇದರ ದೊಡ್ಡ ಕಥೆಯಿದೆ. ತಂದೆಯು ತಿಳಿಸುತ್ತಾರೆ -ಇದು ನನ್ನ ಅವಿನಾಶಿ ಜ್ಞಾನಯಜ್ಞವಾಗಿದೆ. ಅವಿನಾಶಿ ತಂದೆಯ ಮೂಲಕ ಅವಿನಾಶಿ ಯಜ್ಞವಾಗಿದೆ. ಇದು ಸದಾ ನಡೆಯುತ್ತಲೇ ಇರುತ್ತದೆ ಎಂದಲ್ಲ. ಯಾವಾಗ ಇಡೀ ಪ್ರಪಂಚವು ಸ್ವಾಹಾ ಆಗುವ ಸಮಯವು ಬರುವುದೋ ಅಲ್ಲಿಯವರೆಗೆ ಈ ಯಜ್ಞವು ನಡೆಯಬೇಕಾಗಿದೆ ಏಕೆಂದರೆ ತಂದೆಯು ಜ್ಞಾನಸಾಗರನಾಗಿದ್ದಾರೆ. ಭಕ್ತಿಯ ಶಾಸ್ತ್ರಗಳಂತೂ ಅನೇಕ ಇವೆ. ಜ್ಞಾನಸಾಗರ ತಂದೆಯಾಗಿದ್ದಾರೆ ಅಂದಮೇಲೆ ಅವಶ್ಯವಾಗಿ ಅವರ ಬಳಿ ಹೊಸಜ್ಞಾನವಿರುವುದು. ತಂದೆಯು ತನ್ನ ಪೂರ್ಣ ಪರಿಚಯವನ್ನು ನೀಡುತ್ತಾರೆ ಮತ್ತು ಸೃಷ್ಟಿಯು ಹೇಗೆ ತಿರುಗುತ್ತದೆ ಎಂಬುದನ್ನೂ ತಿಳಿಸುತ್ತಾರೆ. ಇದರಿಂದ ಆತ್ಮವು ತ್ರಿಕಾಲದರ್ಶಿಯಾಗುತ್ತದೆ. ತ್ರಿಕಾಲದರ್ಶಿತನದ ಜ್ಞಾನ ಮತ್ತ್ಯಾರೂ ಕೊಡಲು ಸಾಧ್ಯವಿಲ್ಲ. ಮೊದಲನೆಯದಾಗಿ ಜ್ಞಾನವನ್ನು ಧಾರಣೆ ಮಾಡಬೇಕು ಎರಡನೆಯದಾಗಿ ಯೋಗಬಲದಿಂದ ವಿಕರ್ಮಾಜೀತರಾಗಬೇಕಾಗಿದೆ. ಜನ್ಮ-ಜನ್ಮಾಂತರದ ಪಾಪಗಳ ಯಾವ ಹೊರೆಯು ತಲೆಯ ಮೇಲಿದೆಯೊ ಅದು ಸುಟ್ಟುಹೋಗುವುದರಲ್ಲಿ ಸಮಯ ಹಿಡಿಸುತ್ತದೆ. ಎಷ್ಟೊಂದು ವರ್ಷಗಳಾಯಿತು ಆದರೂ ಸಹ ಕರ್ಮಾತೀತರಾಗಿಲ್ಲ. ಯಾವಾಗ ಕರ್ಮಾತೀತ ಸ್ಥಿತಿಯು ಬರುವುದೋ ಆಗ ಈ ಯಜ್ಞವು ಸಮಾಪ್ತಿಯಾಗುವುದು. ಈ ಯಜ್ಞವು ಬಹಳ ದೊಡ್ಡದಾಗಿದೆ. ಅದರ ಚಿಹ್ನೆಗಳನ್ನೂ ನೋಡುತ್ತಿದ್ದೀರಿ, ತಯಾರಿಗಳೂ ಆಗುತ್ತಿದೆ. ಮುಂದೆ ಹೋದಂತೆ ನೀವು ನೋಡುವಿರಿ–ತಯಾರಿಯೂ ಆಗುತ್ತಿದೆ, ಪ್ರಾಕೃತಿಕ ಆಪತ್ತುಗಳ ತಯಾರಿಯೂ ಆಗುತ್ತಿವೆ. ಕೆಲವೊಮ್ಮೆ ಚಂಡಮಾರುತಗಳು

ಬೀಸುತ್ತವೆ, ಕೆಲವೊಮ್ಮೆ ಭೂಕಂಪಗಳು, ಇನ್ನೂ ಕೆಲವೊಮ್ಮೆ ಬರಗಾಲವು ಬರುವುದು. ಅವರಂತೂ ಇನ್ನು 4 ವರ್ಷಗಳ ಯೋಜನೆಗಳನ್ನು ಮಾಡಿದ್ದೇವೆ, ಅದರಿಂದ ಬಹಳ ಆಹಾರಧಾನ್ಯಗಳು ಹೆಚ್ಚಾಗಿಬಿಡುವುದೆಂದು ಸುಳ್ಳು ಹೇಳುತ್ತಿರುತ್ತಾರೆ. ಅಂದರೆ ತಿನ್ನುವಂತಹ ಮನುಷ್ಯರೂ ಸಹ ಹೆಚ್ಚಾಗಿದ್ದಾರಲ್ಲವೆ. ಕೇವಲ ಮನುಷ್ಯರಷ್ಟೇ ಅಲ್ಲ ಪ್ರಾಣಿಗಳು, ಪಕ್ಷಿಗಳು, ನೊಣಗಳೂ ಸಹ ತಿಂದುಬಿಡುತ್ತವೆ. ಪ್ರವಾಹ ಬಂದರೆ ಬಹಳ ನಷ್ಟಮಾಡಿಬಿಡುತ್ತವೆ. ಇದಂತೂ ಪಾಪ ಅವರಿಗೆ ಗೊತ್ತಾಗುವುದೇ ಇಲ್ಲ. ನೀವು ತಿಳಿದುಕೊಂಡಿದ್ದೀರಿ -ಈ ಬರಗಾಲ ಇತ್ಯಾದಿಗಳು ಅವಶ್ಯವಾಗಿ ಬರಲೇಬೇಕಾಗಿದೆ, ಅದರ ಮುನ್ಸೂಚನೆಯೂ ಕಾಣುತ್ತಿದೆ. ಸ್ವಲ್ಪ ಯುದ್ಧವಾದರೂ ಸಾಕು ಆಹಾರಧಾನ್ಯಗಳು ಬರುವುದೇ ನಿಂತುಹೋಗುತ್ತದೆ. ಮೊದಲ ಯುದ್ಧದಲ್ಲಿಯೂ ಸಹ ಎಷ್ಟೊಂದು ಸ್ಟೀಮರ್ಗಳು ಮುಳುಗಿದ್ದವು. ಬಹಳ ನಷ್ಟ ಮಾಡಿದ್ದವು.

ತಂದೆಯು ತಿಳಿಸುತ್ತಾರೆ - ಮಕ್ಕಳೇ, ನಾನು 5000 ವರ್ಷಗಳ ಮೊದಲೂ ಸಹ ಈ ಯಜ್ಞವನ್ನು ರಚಿಸಿದ್ದೆನು ಮತ್ತು ನೀವು ರಾಜಯೋಗವನ್ನು ಕಲಿತಿದ್ದಿರಿ, ಯಜ್ಞವನ್ನು ಬ್ರಾಹ್ಮಣರ ಮೂಲಕವೇ ರಚಿಸಲಾಗುತ್ತದೆ. ಗೀತೆಯಲ್ಲಂತೂ ಯುದ್ಧ, ಮುಂತಾದುವುಗಳ ಮಾತುಗಳನ್ನು ಬರೆದಿದ್ದಾರೆ. ಸಂಜಯ ಮುಂತಾದವರೂ ಇದ್ದಾರೆ. ಇವೆಲ್ಲವೂ ಭಕ್ತಿಮಾರ್ಗದ ಸಾಮಗ್ರಿಯಾಗಿದೆ, ಇವೂ ಅವಿನಾಶಿಯಾಗಿದೆ. ಭಕ್ತಿಮಾರ್ಗದಲ್ಲಿ ಪುನಃ ಅವೇ ಸಾಮಗ್ರಿಗಳು ಹೊರಬರುವವು. ರಾಮಾಯಣ ಮುಂತಾದ ಯಾವುದೆಲ್ಲಾ ಶಾಸ್ತ್ರಗಳು ಇವೆಯೋ ಇವು ಪುನಃ ರಚಿಸಲ್ಪಡುತ್ತವೆ. ಯಾರೆಲ್ಲರ ರಾಜಧಾನಿಯು ನಡೆಯಿತೋ ಅಂದರೆ ಬ್ರಿಟಿಷರು ಬಂದರು, ಮುಸಲ್ಮಾನರು ಬಂದರು, ಯಾರೆಲ್ಲರೂ ಇದ್ದುಹೋದರು ಅವರೆಲ್ಲರೂ ಪುನಃ ಬರುತ್ತಾರೆ, ಪುನಃ ವಿಭಾಗಗಳಾಗುತ್ತವೆ. ಈ ಮಾತುಗಳನ್ನು ನೀವೇ ತಿಳಿದುಕೊಳ್ಳಬಲ್ಲಿರಿ, ನಿಮ್ಮಲ್ಲಿಯೂ ನಂಬರ್ವಾರ್ ಇದ್ದಾರೆ. ಕೆಲವರಂತೂ ಏನನ್ನೂ ತಿಳಿದುಕೊಳ್ಳುವುದಿಲ್ಲ ಅಂದಾಗ ತಂದೆಯು ತಿಳಿಸುತ್ತಾರೆ - ಎಷ್ಟೊಂದು ಯಜ್ಞಗಳನ್ನು ರಚಿಸುತ್ತಾರೆ ಅವರಿಗೆ ತಿಳಿಸಬೇಕು - ವಾಸ್ತವದಲ್ಲಿ ಅಶ್ವಮೇಧ ಅವಿನಾಶಿ ರುದ್ರಜ್ಞಾನಯಜ್ಞವಾಗಿದೆ, ಅದನ್ನು ರುದ್ರಶಿವ ಭಗವಂತನೇ ರಚಿಸಿದರು, ಕೃಷ್ಣನಲ್ಲ. ಕೃಷ್ಣನಿಗೆ ಅದೇ ಚಿತ್ರವು ಸತ್ಯಯುಗದಲ್ಲಿ ಸಿಗುವುದು ಮತ್ತೆಂದೂ ಸಿಗಲು ಸಾಧ್ಯವಿಲ್ಲ ಏಕೆಂದರೆ ಆ ನಾಮ, ರೂಪ, ದೇಶ, ಕಾಲ ಎಲ್ಲವೂ ಬದಲಾಗುತ್ತಾ ಹೋಗುತ್ತವೆ. ಕೃಷ್ಣನೇ ಬಂದು ತನ್ನನ್ನು ಪತಿತ-ಪಾವನನೆಂದು ಕರೆಸಿಕೊಳ್ಳಲು ಸಾಧ್ಯವಿಲ್ಲ. ಪತಿತ-ಪಾವನ ಒಬ್ಬರೇ ಪರಮಾತ್ಮನಾಗಿದ್ದಾರೆ. ಮೊದಲಿನಿಂದಲೇ ರೂಪವನ್ನೇಕೆ ತೋರಿಸಿಲ್ಲವೆಂದು ನೀವು ಕೇಳಲು ಸಾಧ್ಯವಿಲ್ಲ. ಎಲ್ಲವನ್ನೂ ಮೊದಲೇ ತಿಳಿಸಿಬಿಡಲು ಸಾಧ್ಯವೆ! ಮೊದಲಿನಿಂದ ಈ ಜ್ಞಾನವನ್ನೇಕೆ ಕೊಡುತ್ತಿರಲಿಲ್ಲ, ಒಂದೇ ದಿನದಲ್ಲಿ ಏಕೆ ಜ್ಞಾನವನ್ನು ಕೊಡುವುದಿಲ್ಲವೆಂದು ನೀವು ಕೇಳುತ್ತೀರಿ ಆದರೆ ಇಲ್ಲ. ಇವರಂತೂ ಜ್ಞಾನಸಾಗರನಾಗಿದ್ದಾರೆ ಅಂದಮೇಲೆ ಅವಶ್ಯವಾಗಿ ನಿಧಾನವಾಗಿಯೂ ತಿಳಿಸುತ್ತಾ ಇರುತ್ತಾರೆ. ಎಲ್ಲವನ್ನೂ ಒಂದೇ ಸಮಯದಲ್ಲಿ ಓದಿಬಿಡುವುದಿಲ್ಲ, ನಂಬರ್ವಾರ್ ಓದುತ್ತೀರಿ ಮತ್ತು ವಿದ್ಯೆಯಲ್ಲಿ ಸಮಯ ಹಿಡಿಸುತ್ತದೆ. ಇದರ ಹೆಸರೇ ಅವಿನಾಶಿ ರುದ್ರಜ್ಞಾನ ಯಜ್ಞವಾಗಿದೆ. ಇದನ್ನಂತೂ ಎಲ್ಲಿಯೂ ಬರೆದಿಲ್ಲ. ಶಾಸ್ತ್ರಗಳಲ್ಲಿ ನಿಮಿತ್ತಮಾತ್ರ ಕೇವಲ ಅಕ್ಷರಗಳಿವೆ, 'ಭಾರತದ ಪ್ರಾಚೀನ ಸಹಜ ರಾಜಯೋಗ' ಪ್ರಾಚೀನ ಅಂದರೆ ಯಾವಾಗ? ಪ್ರಾರಂಭದಲ್ಲಿ. ಅವಶ್ಯವಾಗಿ ಈ ಅವಿನಾಶಿ ಜ್ಞಾನಯಜ್ಞದಿಂದಲೇ ಸ್ವರ್ಗವನ್ನು ಮಾಡಿರಬೇಕು. ತಂದೆಯು ತಿಳಿಸುತ್ತಾರೆ - ನಾನು ಕಲ್ಪ-ಕಲ್ಪದ ಸಂಗಮಯುಗದಲ್ಲಿ ಬರುತ್ತೇನೆ ಆದರೆ ಈ ಮನುಷ್ಯರು ತಪ್ಪು ಮಾಡಿಬಿಟ್ಟಿದ್ದಾರೆ, ಸಮಯವನ್ನೂ ಬದಲಾಯಿಸಿಬಿಟ್ಟಿದ್ದಾರೆ. ಸತ್ಯಯುಗದ ಆಯಸ್ಸನ್ನೂ ಸಹ ಲಕ್ಷಾಂತರ ವರ್ಷಗಳೆಂದು ಬರೆದು ಸುಳ್ಳನ್ನು ಹೇಳಿಬಿಟ್ಟಿದ್ದಾರೆ. ಇದಂತೂ 4 ಭಾಗಗಳಾಗಿವೆ. ಸ್ವಸ್ತಿಕದಲ್ಲಿಯೂ ಸಹ 4 ಭಾಗಗಳನ್ನು ತೋರಿಸುತ್ತಾರೆ ಜ್ಞಾನ ಮತ್ತು ಭಕ್ತಿ–ಜ್ಞಾನ ದಿನ ಅರ್ಧಕಲ್ಪ ಭಕ್ತಿ ರಾತ್ರಿ ಅರ್ಧಕಲ್ಪ. ಜ್ಞಾನದ ಪ್ರಾಲಬ್ಧವಾಗಿ ಬೆಣ್ಣೆಯು ಸಿಗುತ್ತದೆ, ಭಕ್ತಿಯ ಪ್ರಾಲಬ್ಧವಾಗಿ ಮಜ್ಜಿಗೆಯು ಸಿಗುತ್ತದೆ. ಬೀಳುತ್ತಾ-ಬೀಳುತ್ತಾ ಒಂದೇ ಸಾರಿ ಸಮಾಪ್ತಿಯಾಗಿಬಿಡುತ್ತಾರೆ. ಹೊಸಪ್ರಪಂಚವು ಮತ್ತೆ ಅವಶ್ಯವಾಗಿ ಹಳೆಯದಾಗಬೇಕಾಗುತ್ತದೆ, ಕಲೆಗಳು ಕಡಿಮೆಯಾಗುತ್ತದೆ ಆದ್ದರಿಂದ ಈಗ ಇದಕ್ಕೆ ಭ್ರಷ್ಟಾಚಾರಿ, ವಿಕಾರಿ ಎಂದು ಹೇಳಲಾಗುತ್ತದೆ, ಅಸುರಿ ಪ್ರಪಂಚವಾಗಿದೆಯಲ್ಲವೆ. ನಿಮಗೆ ಗೊತ್ತಿದೆ - ಈ ಭಕ್ತಿ ಮುಂತಾದುವುಗಳನ್ನು ಮಾಡುವುದರಿಂದ ಭಗವಂತನೆಂದೂ ಸಿಗುವುದಿಲ್ಲ. ಭಕ್ತಿಯನ್ನಂತೂ ಮಾಡುತ್ತಲೇ ಬಂದಿದ್ದಾರೆ, ಇದು ನಿಲ್ಲುವುದಿಲ್ಲ. ಒಂದುವೇಳೆ ಭಗವಂತನು ಸಿಕ್ಕಿಬಿಟ್ಟಿದ್ದರೆ ಭಕ್ತಿಯನ್ನು ನಿಲ್ಲಿಸುತ್ತಿದ್ದರಲ್ಲವೆ. ಅರ್ಧಕಲ್ಪ ಭಕ್ತಿಯು ನಡೆಯಬೇಕಾಗಿದೆ, ಇವೆಲ್ಲಾ ಮಾತುಗಳನ್ನು ಮನುಷ್ಯರಿಗೆ ತಿಳಿಸಬೇಕಾಗುತ್ತದೆ. ಪ್ರಪಂಚವು ಹೇಗೆ ಹೊಸದಾಗುತ್ತದೆ ಎಂದು ಚಿತ್ರಗಳಿಂದ ಸ್ಪಷ್ಟ ಮಾಡಿಸಬೇಕು. ಹಳೆಯ ಪ್ರಪಂಚವು ವಿನಾಶವಾಗಿ ನಂತರ ಹೊಸ ಪ್ರಪಂಚವು ಸ್ಥಾಪನೆಯಾಗುತ್ತದೆ. ಈಗ ಪ್ರದರ್ಶನಿ ಮುಂತಾದುವುಗಳನ್ನು ದೊಡ್ಡವರಿಂದ ಉದ್ಘಾಟನೆ ಮಾಡಿಸಲಾಗುತ್ತದೆ. ಸಹಾಯವಂತೂ ತೆಗೆದುಕೊಳ್ಳಬೇಕಾಗುತ್ತದೆಯಲ್ಲವೆ ನಂತರ ಅವರಿಗೆ ಧನ್ಯವಾದ ತಿಳಿಸಬೇಕಾಗುತ್ತದೆ. ಶುಭಾಷಯಗಳನ್ನು ಕೊಡಲು ಪತ್ರಿಕೆಯನ್ನು ಕೊಡಲಾಗುತ್ತದೆ. ಈಗಂತೂ ಮನುಷ್ಯರು ತಮ್ಮ ಮೇಲೆ ಎಷ್ಟು ದೊಡ್ಡ-ದೊಡ್ಡ ಬಿರುದುಗಳನ್ನು ಇಟ್ಟುಕೊಂಡಿದ್ದಾರೆ. ಶ್ರೀ ಶ್ರೀ ಎಂಬ ಬಿರುದನ್ನು ಇಟ್ಟುಕೊಂಡಿದ್ದಾರೆ. ಶ್ರೇಷ್ಠಾತಿ ಶ್ರೇಷ್ಠ ತಂದೆಯು ತಿಳಿಸುತ್ತಾರೆ-ಶ್ರೇಷ್ಠಾಚಾರಿ ಪ್ರಪಂಚವಿತ್ತು ಈಗ ಭ್ರಷ್ಟಾಚಾರಿಯಾಗಿದೆ. ಶ್ರೇಷ್ಠಾಚಾರಿಯನ್ನಾಗಿ ಮಾಡಲು ತಂದೆಯು ಮತ್ತೆ ಬಂದಿದ್ದಾರೆ ಆದರೆ ಮನುಷ್ಯರು ಮೊದಲಿನಿಂದಲೇ ಶ್ರೀ ಎಂದು ತಮ್ಮ ಹೆಸರನ್ನು ಇಟ್ಟುಕೊಳ್ಳುತ್ತಾರೆ. ವಾಸ್ತವದಲ್ಲಿ ಶ್ರೀಲಕ್ಷ್ಮಿ ಮತ್ತು ಶ್ರೀನಾರಾಯಣನೆಂದು ಸತ್ಯಯುಗದಲ್ಲಿ ಕರೆಯಲಾಗುತ್ತದೆ. ರಾಜರಿಗೆ ಶ್ರೀ ಎಂಬ ಬಿರುದನ್ನು ಎಂದೂ ಕೊಡುತ್ತಿರಲಿಲ್ಲ. ಅವರಿಗೆ ಹಿಸ್ ಹೈನೆಸ್ (ರಾಜರಿಗೆ ಕೊಡುುವ ಗೌರವ) ಎಂದು ಹೇಳಲಾಗುತ್ತದೆ. ಎಲ್ಲರಿಗಿಂತ ದೊಡ್ಡ ಹಿಸ್ ಹೋಲಿನೆಸ್ ಲಕ್ಷ್ಮಿ-ನಾರಾಯಣರಿಗೆ ರಾಜರೂ ಸಹ ಪೂಜೆ ಮಾಡುತ್ತಾರೆ ಏಕೆಂದರೆ ಅವರು ಪವಿತ್ರರಾಗಿದ್ದಾರೆ, ತಾವು ಪತಿತರಾಗಿದ್ದಾರೆ.

ಪಾವನ ರಾಜರಿಗೇ ಹಿಸ್ ಹೋಲಿನೆಸ್ ಎಂದು ಹೇಳಲಾಗುತ್ತದೆ. ಈಗಂತೂ ಹಿಸ್ ಹೈನೆಸ್ನ ಬದಲಾಗಿ ಎಲ್ಲರಿಗೆ ಬಹಳ ಬಿರುದುಗಳನ್ನು ಕೊಟ್ಟುಬಿಡುತ್ತಾರೆ. ಎಲ್ಲರಿಗೆ ಶ್ರೀ ಶ್ರೀ ಎಂದು ಹೇಳುತ್ತಿರುತ್ತಾರೆ. ಈಗ ಬೇಹದ್ದಿನ ತಂದೆಯು ನಿಮ್ಮನ್ನು ಶ್ರೀಯನ್ನಾಗಿ ಮಾಡುತ್ತಿದ್ದಾರೆ. ಹೊಸಪ್ರಪಂಚವು ಹೇಗೆ ಸ್ಥಾಪನೆಯಾಗುತ್ತದೆ ಎಂದು ಚಿತ್ರಗಳಿಂದಲೇ ನೀವು ತಿಳಿಸಬಹುದು. ನಾವು ಭ್ರಷ್ಟಾಚಾರಿಗಳಿಂದ ಶ್ರೇಷ್ಠಾಚಾರಿಯನ್ನಾಗಿ ಮಾಡುವ ಸೇವೆ ಮಾಡುತ್ತಿದ್ದೇವೆ ಅಂದಾಗ ತಾವು ಉದ್ಘಾಟನೆ ಮಾಡಿ. ಸೆಕೆಂಡಿನಲ್ಲಿ ಜೀವನ್ಮುಕ್ತಿಯೆಂದು ಗಾಯನವಿದೆಯಲ್ಲವೆ ಎಂದು ಅವರಿಗೆ ತಿಳಿಸಬೇಕು. ತಿಳಿಸುವವರು ಬಹಳ ತೀಕ್ಷ್ಣಬುದ್ಧಿಯವರಾಗಿರಬೇಕು, ಸ್ಫೂರ್ತಿಯಿರಬೇಕು. ಸಿಪಾಯಿಗಳು ಎಷ್ಟೊಂದು ಜೋರಾಗಿ (ಟೆಪ್ಪಾಪ್) ರುತ್ತಾರೆ. ಶಿವಶಕ್ತಿ ಸೈನ್ಯವೆಂದು ನೀವು ಮಕ್ಕಳ ಹೆಸರೇ ಎಷ್ಟು ಚೆನ್ನಾಗಿದೆ. ಈ ಜ್ಞಾನವು ಅಬಲೆಯರು, ಅಹಲ್ಯೆಯರಿಗೆ ಸಿಗುತ್ತದೆ. ಇಲ್ಲಿಯ ಮಾತುಗಳೇ ಅದ್ಭುತವಾಗಿವೆ. ಶ್ರೇಷ್ಠಾತಿ ಶ್ರೇಷ್ಠ ಭಗವಂತ ಮತ್ತು ಓದಿಸುವುದಂತೂ ನೋಡಿ ಎಂತಹವರಿಗೆ! ಅಹಲ್ಯೆಯರು, ಕುಬ್ಜೆಯರಿಗೆ. ಭಗವಾನುವಾಚ - ಅವರಿಗೆ ರಾಜಯೋಗವನ್ನು ಕಲಿಸುತ್ತೇನೆ, ನಾಟಕದಲ್ಲಿ ಈ ರೀತಿ ನಿಗಧಿಯಾಗಿದೆ ಆದರೆ ಎಲ್ಲರೂ ತಮ್ಮನ್ನು ಪಾಪಾತ್ಮರೆಂದು ತಿಳಿಯುತ್ತಾರೆಯೇ! ತಂದೆಯು ತಿಳಿಸುತ್ತಾರೆ-ಈ ಅಂತಿಮ ಜನ್ಮದಲ್ಲಿ ಪವಿತ್ರರಾಗುತ್ತೀರೆಂದರೆ ಒಂದು ಸೆಕೆಂಡಿನಲ್ಲಿ ಜೀವನ್ಮುಕ್ತಿಯನ್ನು ಪಡೆಯುತ್ತೀರಿ. ಬರುವುದಂತೂ ಬರುತ್ತಾರೆ, ಆಶ್ಚರ್ಯವಾಗಿ ಬರುತ್ತಾರೆ ಕೇಳುತ್ತಾರೆ, ತಂದೆಯ ಮಕ್ಕಳಾಗುತ್ತಾರೆ ಆದರೂ ಸಹ ಮತ್ತೆ ಬೀಳುತ್ತಾರೆ, ಓಡಿಹೋಗುತ್ತಾರೆ. ಇದಂತೂ ಪ್ರಾರಂಭದಿಂದ ಹಿಡಿದು ಆಗುತ್ತಲೇ ಇರುತ್ತದೆ. ನಮಗೆ ಪಕ್ಕಾ ನಿಶ್ಚಯವಿದೆ ಎಂದು ಬೆಳಗ್ಗೆ ಹೇಳುತ್ತಾರೆ ಮತ್ತೆ ಸಂಜೆಗಾಗಲೇ ನಮಗೆ ಸಂಶಯವಿದೆ ನಾನು ಹೋಗುತ್ತೇನೆ, ನಾನು ನಡೆಯಲಾಗುವುದಿಲ್ಲ ಎಂದು ಹೇಳುತ್ತಾರೆ. ಗುರಿಯು ಶ್ರೇಷ್ಠವಾಗಿದೆ, ನಾನು ಬಿಟ್ಟು ಹೋಗುತ್ತೇನೆಂದು ಹೇಳುತ್ತಾರೆ. ಇದೂ ಸಹ ನಾಟಕದ ಪೂರ್ವನಿಶ್ಚಿತವಾಗಿದೆ, ತಂದೆಗೆ ವಿಚ್ಛೇದನವನ್ನು ಕೊಟ್ಟುಬಿಡುತ್ತಾರೆ. ಮಾಯೆಯು ಇಷ್ಟು ಪ್ರಬಲವಾಗಿದೆ, ನಡೆಯುತ್ತಾ-ನಡೆಯುತ್ತಾ ಚೆನ್ನಾಗಿ ಏಟನ್ನು ಕೊಡುತ್ತದೆ. ಆಗ ಮಕ್ಕಳು ಹೇಳುತ್ತಾರೆ - ಬಾಬಾ, ಮಾಯೆಗೆ ಸ್ವಲ್ಪ ತಣ್ಣಗಾಗಲು ಹೇಳಿ, ಅದಕ್ಕೆ ತಂದೆಯು ಹೇಳುತ್ತಾರೆ - ನಾನು ಇನ್ನೂ ಹೆಚ್ಚು ಬಿಸಿಮಾಡು ಎಂದು ಮಾಯೆಗೆ ಹೇಳುತ್ತೇನೆ. ಆದ್ದರಿಂದ ಬಹಳ ಎಚ್ಚರದಿಂದಿರಿ. ಮಾಯೆಯ ಏಟನ್ನು ತಿಂದು ನೀವು ಸಿಕ್ಕಿಹಾಕಿಕೊಳ್ಳಬೇಡಿ.ಗೃಹಸ್ತ ವ್ಯವಹಾರ ದಲ್ಲಿರುತ್ತಾ ಜನಕನ ರೀತಿ ಮುಕ್ತಿಯನ್ನು ಪಡೆಯಬೇಕೆಂದು ನೀವು ಬಯಸುತ್ತೀರಿ.

ತಂದೆಯು ಹೇಳುತ್ತಾರೆ - ಒಂದು ಜನ್ಮದಲ್ಲಿ ಪವಿತ್ರರಾಗುತ್ತೀರೆಂದರೆ ನೀವು ಸ್ವರ್ಗದ ಮಾಲೀಕರಾಗುತ್ತೀರಿ. ವಿಕಾರಗಳು ಮನುಷ್ಯರಿಗೆ ಎಷ್ಟೊಂದು ಇಷ್ಟವಾಗುತ್ತದೆ. ನಡೆಯುತ್ತಾ-ನಡೆಯುತ್ತಾ ಬಿದ್ದುಹೋಗುತ್ತಾರೆ. ಒಂದುವೇಳೆ ವಿವಾಹ ಮಾಡಿಕೊಳ್ಳಲು ಇಚ್ಛಿಸುವುದಿಲ್ಲವೆಂದಾಗ ಸರ್ಕಾರವು ಏನೂ ಮಾಡಲು ಸಾಧ್ಯವಾಗುವುದಿಲ್ಲ. ಈ ರೀತಿ ತಿಳಿಸಬಹುದು-ನಾವು ಪೂಜಾರಿಯಾಗಿ ಎಲ್ಲರ ಮುಂದೆ ತಲೆಬಾಗಿಸುವಂತಹ ಪತಿತರಾಗುವುದಾದರೂ ಏಕೆ! ನಾನು ಕುಮಾರಿಯಾಗಿದ್ದೇನೆ ಎಂದರೆ ಎಲ್ಲರೂ ನನ್ನ ಮುಂದೆ ತಲೆಬಾಗುತ್ತಾರೆ ಅಂದಾಗ ನಾವೇಕೆ ಪೂಜ್ಯರಾಗಿರಬಾರದು! ಬೇಹದ್ದಿನ ತಂದೆಯೂ ಸಹ ತಿಳಿಸುತ್ತಾರೆ - ಮಕ್ಕಳೇ, ಪವಿತ್ರ ಪೂಜ್ಯರಾಗಿ. ಒಂದೇ ರಾಜಯೋಗದ ಪರೀಕ್ಷೆಯಾಗಿದೆ ಇದರಲ್ಲಿಯೇ ಅನೇಕರು ಏಳುತ್ತಾರೆ ಮತ್ತು ಬೀಳುತ್ತಾರೆ. ಪ್ರತಿಯೊಬ್ಬರು ತಮ್ಮ-ತಮ್ಮ ಪಾತ್ರವನ್ನು ಅಭಿನಯಿಸುತ್ತಾರೆ ಆದರೂ ಸಹ ಕಲ್ಪದ ಹಿಂದೆ ಬಂದಿರುವ ಫಲಿತಾಂಶವೇ ಬರುವುದು. ಇದು ನಾಟಕವಾಗಿದೆ, ನಾವು ಪಾತ್ರಧಾರಿಗಳಾಗಿದ್ದೇವೆ. ಪೂರ್ಣ ನಷ್ಟಮೋಹಿಗಳಾದಾಗಲೇ ತಂದೆಯೊಂದಿಗೆ ಪೂರ್ಣ ಪ್ರೀತಿಯು ಜೋಡಣೆಯಾಗುವುದು. ಬಾಬಾ, ನಾವಂತೂ ತಮ್ಮನ್ನೇ ನೆನಪು ಮಾಡುತ್ತೇವೆ, ತಮ್ಮಿಂದ ಆಸ್ತಿಯನ್ನು ತೆಗೆದುಕೊಂಡು ತೋರಿಸುತ್ತೇವೆ. ಇಂತಹ ಪ್ರತಿಜ್ಞೆಯನ್ನು ಮಾಡಬೇಕು ಆಗಲೇ ಸ್ತ್ರೀ-ಪುರುಷ ಇಬ್ಬರೂ ಪವಿತ್ರರಾಗಿ ಸ್ವರ್ಗಧಾಮಕ್ಕೆ ಹೋಗಲು ಸಾಧ್ಯ. ಇಬ್ಬರೂ ಜ್ಞಾನಚಿತೆಯ ಮೇಲೆ ಕುಳಿತುಕೊಂಡುಬಿಡುತ್ತಾರೆ. ಹೀಗೆ ಅನೇಕ ದಂಪತಿಗಳು ಜ್ಞಾನಕ್ಕೆ ಬರುತ್ತಾರೆ ನಂತರ ವೃಕ್ಷ ಬೇಗ-ಬೇಗ ವೃದ್ಧಿಹೊಂದಲು ಪ್ರಾರಂಭವಾಗಿಬಿಡುವುದು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತಾ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1.ಈ ಅವಿನಾಶಿ ಜ್ಞಾನಯಜ್ಞದಲ್ಲಿ ತಮ್ಮ ಈ ರಥಸಹಿತವಾಗಿ ಎಲ್ಲವನ್ನೂ ಸ್ವಾಹಾ ಮಾಡಬೇಕಾಗಿದೆ. ಸರ್ವೀಸ್ನಾಗಿ ಬಹಳ-ಬಹಳ ಧೃಡತೆ ಮತ್ತು ಸ್ಫೂರ್ತಿಯುಳ್ಳವರಾಗಬೇಕಾಗಿದೆ.

2. ಮಾಯೆಯು ಎಷ್ಟೇ ಬಿಸಿಯಾಗಿಬಂದರೂ, ಎಚ್ಚರಿಕೆಯಿಂದಿದ್ದು ಅದರ ಪೆಟ್ಟಿನಿಂದ ಸ್ವಯಂಅನ್ನು ರಕ್ಷಿಸಿಕ್ಕಳ್ಳಬೇಕು, ಗಾಬರಿಯಾಗಬಾರದು.

ವರದಾನ: ದಯಾ ಭಾವವನ್ನು ಧಾರಣೆ ಮಾಡಿ ಸರ್ವ ಸಮಸ್ಯೆಗಳನ್ನು ಸಮಾಪ್ತಿ ಮಾಡುವಂತಹ ಮಾಸ್ಟರ್ ದಾತ ಭವ.

ಯಾವುದೇ ಆತ್ಮರ ಸಂಪರ್ಕದಲ್ಲಿ ಬಂದಾಗ, ಯಾರು ಎಂತಹದ್ದೇ ಸಂಸ್ಕಾರ ಇರುವವರಾಗಿರಲಿ, ವಿರೋಧ ಮಾಡುವವರಾಗಿರಲಿ, ಸ್ವಭಾವದ ಭೇದ ಭಾವ ಇರಲಿ, ಕ್ರೋಧಿ ಆಗಿರಲಿ, ಎಷ್ಟೇ ವಿರೋಧಿ ಆಗಿರಲಿ, ತಮ್ಮ

ದಯಾ ಭಾವನೆ ಅವರ ಅನೇಕ ಜನ್ಮಗಳ ಕಠಿಣ ಲೆಕ್ಕಾಚಾರವನ್ನು ಸೆಕೆಂಡಿನಲ್ಲಿ ಸಮಾಪ್ತಿ ಮಾಡಿ ಬಿಡುತ್ತದೆ. ತಾವು ಕೇವಲ ತಮ್ಮ ಅನಾದಿ, ಆದಿ ದಾತತನದ ಸಂಸ್ಕಾರಗಳನ್ನು ಇಮರ್ಜ್ ಮಾಡಿಕೊಂಡು ದಯಾ ಭಾವನೆಯನ್ನು ಧಾರಣೆ ಮಾಡಿಕೊಂಡಾಗ ಬ್ರಾಹ್ಮಣ ಪರಿವಾರದ ಸರ್ವ ಸಮಸ್ಯೆಗಳು ಸಮಾಪ್ತಿಯಾಗಿ ಬಿಡುತ್ತದೆ.

ಸ್ಲೋಗನ್: ತಮ್ಮ ದಯಾ ಹೃದಯದ ಸ್ವರೂಪ ಅಥವಾ ದೃಷ್ಟಿಯಿಂದ ಪ್ರತಿಯೊಂದು ಆತ್ಮನನ್ನು ಪರಿವರ್ತನೆ ಮಾಡುವುದೇ ಪುಣ್ಯಾತ್ಮರಾಗುವುದು.